ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

ಸಂ.ಕಂ.ಪಹಣಿ/ವಿವಾದ/ 33/2015–16 D. 5.5.18

ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
|---|---|
| 2) ಶ್ರೀ ಕೊಟ್ರಬಸಪ್ಪ<br>3) ಶ್ರೀ ದೊಡ್ಡ ಬಸಪ್ಪ } ತಂದೆ<br>4) ಶ್ರೀ ಹುಚ್ಚಪ್ಪ<br>ದಿ॥ ಈಶ್ವರಪ್ಪ | ಕಂದಾಯ ನಿರೀಕ್ಷಕರು<br>ಹಂಪಸಾಗರ |

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಹನುಮಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನುಗಳು ಸ.ನಂ. 152/ಬಿ ವಿಸ್ತೀರ್ಣ 2–41 ಮತ್ತು ಸ.ನಂ. 195ಬಿ ವಿಸ್ತೀರ್ಣ 0–89 ರ ಜಮೀನುಗಳು ಪವತಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು –ವಿಚಾರಣೆ.**

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹನುಮಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನುಗಳು ಸ.ನಂ. 152/ಬಿ ವಿಸ್ತೀರ್ಣ 2–41 ಹಾಗೂ ಸ.ನಂ. 195/ಬಿ ವಿಸ್ತೀರ್ಣ 0–89 ಎಕರೆ ಜಮೀನುಗಳು ವಾದಿ 1 ರಿಂದ 3 ರವರೆಗಿನ ಅರ್ಜಿದಾರರು ಪವತಿ ಹಕ್ಕು ಬದಲಾವಣೆ ಮಾಡಿಕೊಳ್ಳಲು ನಿಗದಿತ ನಮೂನೆಗಳೊಂದಿಗೆ ಅರ್ಜಿ ಮಾಡಿಕೊಂಡಿರುತ್ತಾರೆ. ಭೂಮಿ ಕೇಂದ್ರದಲ್ಲಿನ ವಹಿವಾಟು ಸಂಖ್ಯೆ 30 ಹ.ಬ.ಸಂಖ್ಯೆ ಹೆಚ್.5/2015–16 ರಂತೆ ದಾಖಲಾಗಿ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಕಂದಾಯ ನಿರೀಕ್ಷಕರಿಗೆ ರವಾನಿಸಲಾಗಿ ಗ್ರಾಮ ಲೆಕ್ಕಾಧಿಕಾರಿ ಹನುಮಗೊಂಡನಹಳ್ಳಿ ಇವರು ಸಂಬಂಧಿಸಿದವರಿಗೆ ಜಾರಿ ಮಾಡಲಾಗಿ ಸದರಿ ವಿವಾದಿತ ಜಮೀನುಗಳ ಮೇಲೆ ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರ ನ್ಯಾಯಾಲಯದ ಆದೇಶ ಸಂಖ್ಯೆ/ ಕಂ/ ಪಹಣಿ/ ಅಪೀಲು/ 61/ 2014–15 ದಿನಾಂಕ: 14–8–2015 ರಂತೆ ತಡೆಯಾಜ್ಞೆ ಹೊರಡಿಸಿರುತ್ತಾರೆಂದು ಆದೇಶದ ಪ್ರತಿ ಸಲ್ಲಿಸಿರುತ್ತಾರೆ. ಮಾನ್ಯ ಸಹಾಯಕರ ನ್ಯಾಯಾಲಯದ ತಡೆ ಆಜ್ಞೆಯು ಭೂಮಿಕೇಂದ್ರದಲ್ಲಿ ವಹಿವಾಟು ಸಂಖ್ಯೆ 38 ಹಾಗೂ ಹ.ಬ.ಸಂಖ್ಯೆ ಹೆಚ್–9/ರಂತೆ ತಡೆಯಾಜ್ಞೆ ದಾಖಲೆಯ ಚೆಕ್ ಲೀಸ್ಟ್ ಕಂದಾಯ ನಿರೀಕ್ಷರಿಗೆ ರವಾನಿಸಿರುತ್ತಾರೆ.

25/05/16

ಕಂದಾಯ ನಿರೀಕ್ಷಕರು ತಡೆಯಾಜ್ಞೆಯನ್ನು ಪಹಣಿ ಅಂಕಣ ಸಂಖ್ಯೆ 11 ರಲ್ಲಿ ದಾಖಲು ಮಾಡಲು ಆದೇಶ ಮಾಡಿರುವರು.

ಈ ಪೂರ್ವದಲ್ಲಿ ವಹಿವಾಟು ಸಂಖ್ಯೆ 30 ಹಾಗೂ ಹ.ಬ.ಸಂಖ್ಯೆ ಹೆಚ್-8 ರಂತೆ ಪವತಿ ವಹಿವಾಟು ನಡೆದಿರುತ್ತದೆ. ಆದರೆ ಈ ಜಮೀನುಗಳಲ್ಲಿನ ಹಕ್ಕು ಬದಲಾವಣೆ ಸಂಖ್ಯೆ 01/ 1996-97, ಹ.ಬ.ಸಂಖ್ಯೆ 08/2009-10 ಹಾಗೂ ಹ.ಬ.ಸಂಖ್ಯೆ 26/2009-10 ರ ಹಕ್ಕು ಬದಲಾವಣೆ ಸಂಖ್ಯೆಗಳಿಗೆ ಮೇಲ್ಮನವಿ ಸಲ್ಲಿಸುತ್ತಾ ತಡೆಯಾಜ್ಞೆ ಪಡೆದಿರುವುದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹನುಮಗೊಂಡನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನುಗಳು ಸ.ನಂ. 152/ಬಿ ವಿಸ್ತೀರ್ಣ 2-41 ಹಾಗೂ ಸ.ನಂ. 195/ಬಿ ವಿಸ್ತೀರ್ಣ 0-89 ಎಕರೆ ಜಮೀನಿಗೆ ಸಂಬಂಧಿಸಿದ ಹಕ್ಕು ಬದಲಾವಣೆ ವಹಿವಾಟನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಪ್ರಕರಣವನ್ನು ಗೈರು ಮಂಜೂರು ಮಾಡಿ ಆದೇಶಿಸಿರುವುದರಿಂದ ಕಂದಾಯ ನಿರೀಕ್ಷಕರ ಆದೇಶದಂತೆ ಪ್ರಕರಣವನ್ನು ಗೈರು ಮಂಜೂರು ಮಾಡಿ ಆದೇಶಿಸಿದೆ. ಮಾನ್ಯ ಸಹಾಯಕ ಆಯುಕ್ತರ ತಡೆಯಾಜ್ಞೆ ಆದೇಶವನ್ನು ಪಹಣಿಗಳಲ್ಲಿ ದಾಖಲಿಸಲು ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿಗಳಿಗೆ
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ